# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಕನಕಪುರ

## ಸಿ.ಸಿ ನಂಃ447/2013

| | | | |
|---|---|---|---|
| **ಚಾಸಾ ಃ** | **6** | **ಪ್ರಾಸಾಃ-** | **1** |

ಹೆಸರು ಪ್ರಕಾಶ್ ಕುಮಾರ್

ತಂದೆಯ ಹೆಸರು ಎಸ್ ಮಾಧು

ವಯಸ್ಸು 52

ಉದ್ಯೋಗ ಎ.ಎಸ್.ಐ ಬಿಡದಿ ಪೊಲೀಸ್ ಠಾಣೆ

ವಿಳಾಸ ರಾಮನಗರ

- - - - - - - - - - - - - - - - - - - - - - - - - - - - - - -

**ದಿಃ01.07.2024ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-</u>**

ನಾನು 2005 ರಿಂದ 2015 ರವರೆಗೆ ಹಾರೋಹಳ್ಳಿ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ.04.5.2012 ರಂದು ಸಂಜೆ 5ಃ30 ಗಂಟೆ ಸಮಯದಲ್ಲಿ ಠಾಣೆಯಲ್ಲಿ ನಾನು, ಚಾಸಾ-4 ಮತ್ತು 5 ಹಾಗೂ 7 ರವರು ಇದ್ದಾಗ ಚಾಸಾ-2 ಮತ್ತು 3 ರವರು ಠಾಣೆಗೆ ಕರೆ ಮಾಡಿ ಚಾಸಾ-4 ರವರೊಂದಿಗೆ ಮಾತನಾಡಿ ಚಾಸಾ-1 ಎ.ಆರ್ ಮೋಹನ್ ಪಿ.ಸಿ-140 ಇವರನ್ನು ತಿಮ್ಮರಾಯಿ ಮತ್ತು ಆತನ ಮನೆಯವರು ಕಟ್ಟಿಹಾಕಿ ಮೋಹನ್ ಇವರನ್ನು ಹೊಡೆಯುತ್ತಿದ್ದಾರೆ ಎಂದು ತಿಳಿಸಿದ್ದು, ಕೊಡಲೆ ನಾವು ಖಾಸಗಿ ಟಾಟಾ ಸುಮೊ ವಾಹನದಲ್ಲಿ ಸ್ಥಳಕ್ಕೆ ಹೋಗಿದ್ದು, ಆ ಸಮಯ ಸಂಜೆ 6ಃ15 ಗಂಟೆಯಾಗಿತ್ತು. ಸದರಿ ತಿಮ್ಮರಾಯಿ ರವರ ಮನೆಯ ಮುಂದಿನ ಮರದ ಕಂಬಕ್ಕೆ ನಮ್ಮ ಸಿಬ್ಬಂದಿ ಎ.ಆರ್ ಮೋಹನ್ ಇವರನ್ನು ಕಟ್ಟಿಹಾಕಿದ್ದು, ಅವರನ್ನು ಹೊಡೆದಿದ್ದರು. ತಕ್ಷಣ ನಾವು ಚಾಸಾ-1 ಮೋಹನ್ ಇವರ ಹಗ್ಗವನ್ನು ಬಿಚ್ಚಿ ಅವರನ್ನು ಘಟನೆಯ ಕುರಿತು ವಿಚಾರಣೆ ಮಾಡಿದಾಗ ಚಾಸಾ-1 ರವರು ಹಾರೋಹಳ್ಳಿ ಠಾಣಾ ಗುನ್ನ ನಂ.107/2012 ರಲ್ಲಿ ಆರೋಪಿತರಾದ

ತಿಮ್ಮರಾಯಿ, ಕುಮಾರ್ ಮತ್ತು ಇತರರ ದಸ್ತಗಿರಿ ಕುರಿತು ಪಿಎಸ್ಐ ರವರ ನಿರ್ದೇಶನದ ಮೇರೆಗೆ ಸದರಿ ಆರೋಪಿತರ ಮನೆಯ ಮುಂದೆ ಬಂದು ತಿಮ್ಮರಾಯಿ ಇರುವುದನ್ನು ಖಚಿತಪಡಿಸಿಕೊಂಡು ಆತನನ್ನು ಠಾಣೆಗೆ ಕರೆದುಕೊಂಡು ಹೋಗುವ ಸಂದರ್ಭದಲ್ಲಿ ಸದರಿ ತಿಮ್ಮರಾಯಿ ಇವರ ಹೆಂಡತಿ ಶಾಂತ ವಿಷ ಕುಡಿಯುತ್ತೇನೆ ಎಂದು ಜೋರಾಗಿ ಕಿರುಚಿಕೊಂಡಿದ್ದು, ಅಲ್ಲದೆ ತಿಮ್ಮರಾಯಿ ಅಣ್ಣನ ಹೆಂಡತಿ ಕಲಾವತಿ ಇವರು ಹಿಟ್ಟಿನದೊಣ್ಣೆಯಿಂದ ಮೋಹನ್ ಇವರ ಎಡಗೈ ಮತ್ತು ಎಡಗಾಲಿಗೆ ಹೊಡೆದಿರುತ್ತಾರೆ ಹಾಗೂ ತಿಮ್ಮರಾಯಿ ಇವರು ಚಾಸಾ-1 ರವರ ಕತ್ತಿನಪಟ್ಟಿ ಹಿಡಿದು ಕಪಾಲಕ್ಕೆ ಹೊಡೆದಿರುತ್ತಾನೆ ಮತ್ತು ತಿಮ್ಮರಾಯಿ ಇವರು ಪೊಲೀಸ್ ಆದರೇನು ಆತನನ್ನು ಕಟ್ಟಿಹಾಕಿ ಸುಟ್ಟುಬಿಡೋಣ ಹಗ್ಗ ತೆಗೆದುಕೊಂಡು ಬನ್ನಿ ಎಂದು ಹೇಳಿದ್ದು, ಆಗ ಕುಟುಂಬದವರಾದ ವೆಂಕಟಚಲ ಇವರ ಹೆಂಡತಿ ಲಕ್ಷ್ಮಮ್ಮ, ಶಾಂತ ಮತ್ತು ತಿಮ್ಮಮ್ಮ ಇವರು ಅಗ್ಗ ಮತ್ತು ಸೀಮೆಎಣ್ಣೆ ತೆಗೆದುಕೊಂಡು ಬಂದು ನಂತರ ಸದರಿ ಮೋಹನ್ ಇವರನ್ನು ಕಂಬಕ್ಕೆ ಕಟ್ಟಿಹಾಕಿ ಮನಬಂದಂತೆ ದೇಹದ ತುಂಬೆಲ್ಲಾ ಹೊಡೆದಿರುತ್ತಾರೆಂದು ಚಾಸಾ-4 ರವರಿಗೆ ತಿಳಿಸಿರುತ್ತಾರೆ ಹಾಗೂ ಅವರೆಲ್ಲರ ವಿರುದ್ಧ ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತಾರೆ. ಆ ಕುರಿತು ನಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲು ಶ್ರೀ ಜಿಎಂಎ ಆರೋಪಿ ಪರ ವಕೀಲರಿಂದಃ-**

ಜಿಎಂಎ ವಕೀಲರು ವಿಎಸ್ಆರ್ ವಕೀಲರ ಆರೋಪಿತರ ಪರ ವಕೀಲರ ಪರವಾಗಿ ಕಾಲಾಕವಾಶ ಕೇಳಿದ್ದು, ಯಾವುದೇ ಸಕಾರಣಗಳು ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ ಃಇಲ್ಲ**

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)**

**ಓ ಹೇ ಕೇ ಸ ಇ**

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ ಕನಕಪುರ.**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಕನಕಪುರ**

**ಸಿ.ಸಿ ನಂಃ447/2013**

| | | | |
|---|---|---|---|
| **ಚಾಸಾ ಃ** | **7** | **ಪ್ರಾಸಾಃ-** | **2** |

| | |
|---|---|
| ಹೆಸರು | ಮಹದೇವಯ್ಯ |
| ತಂದೆಯ ಹೆಸರು | ಲೇಟ್ ಚನ್ನಪ್ಪ |
| ವಯಸ್ಸು | 53 |
| ಉದ್ಯೋಗ | ಎ.ಎಸ್.ಐ ಸಂಚಾರಿ ಪೊಲೀಸ್ ಠಾಣೆ ಕನಕಪುರ |
| ವಿಳಾಸ | ಕನಕಪುರ |

- - - - - - - - - - - - - - - - - - - - - - - - - - - - - -

**ದಿಃ01.07.2024ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ನಾನು 2006 ರಿಂದ 2012 ರವರೆಗೆ ಹಾರೋಹಳ್ಳಿ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ.04.5.2012 ರಂದು ಸಂಜೆ 5ಃ30 ಗಂಟೆ ಸಮಯದಲ್ಲಿ ಠಾಣೆಯಲ್ಲಿ ನಾನು, ಚಾಸಾ-4 ಮತ್ತು 5 ಹಾಗೂ 6 ರವರು ಇದ್ದಾಗ ಚಾಸಾ-2 ಅರುಣ್ ಕುಮಾರ್ ರವರು ಠಾಣೆಗೆ ಕರೆ ಮಾಡಿ ಚಾಸಾ-4 ರವರೊಂದಿಗೆ ಮಾತನಾಡಿ ಚಾಸಾ-1 ಎ.ಆರ್ ಮೋಹನ್ ಪಿ.ಸಿ-140 ಇವರನ್ನು ತಿಮ್ಮರಾಯಿ ಮತ್ತು ಆತನ ಮನೆಯವರು ಕಟ್ಟಿಹಾಕಿ ಮೋಹನ್ ಇವರನ್ನು ಹೊಡೆಯುತ್ತಿದ್ದಾರೆ ಎಂದು ತಿಳಿಸಿದ್ದು, ಕೂಡಲೆ ನಾವು ಖಾಸಗಿ ಟಾಟಾ ಸುಮೊ ವಾಹನದಲ್ಲಿ ಸ್ಥಳಕ್ಕೆ ಹೋಗಿದ್ದು, ಆ ಸಮಯ ಸಂಜೆ 6ಃ15 ಗಂಟೆಯಾಗಿತ್ತು. ಸದರಿ ತಿಮ್ಮರಾಯಿ ರವರ ಮನೆಯ ಮುಂದಿನ ಮರದ ಕಂಬಕ್ಕೆ ನಮ್ಮ ಸಿಬ್ಬಂದಿ ಎ.ಆರ್ ಮೋಹನ್ ಇವರನ್ನು ಕಟ್ಟಿಹಾಕಿದ್ದು, ಅವರನ್ನು ಹೊಡೆದಿದ್ದರು. ತಕ್ಷಣ ನಾವು ಚಾಸಾ-1 ಮೋಹನ್ ಇವರ ಹಗ್ಗವನ್ನು ಬಿಚ್ಚಿ ಅವರನ್ನು ಘಟನೆಯ ಕುರಿತು ವಿಚಾರಣೆ ಮಾಡಿದಾಗ ಚಾಸಾ-1 ರವರು ಹಾರೋಹಳ್ಳಿ ಠಾಣಾ ಗುನ್ನ ನಂ.107/2012 ರಲ್ಲಿ ಆರೋಪಿತರಾದ ತಿಮ್ಮರಾಯಿ, ಕುಮಾರ್ ಮತ್ತು ಇತರರ ದಸ್ತಗಿರಿ ಕುರಿತು ಪಿಎಸ್ಐ ರವರ ನಿರ್ದೇಶನದ

ಮೇರೆಗೆ ಸದರಿ ಆರೋಪಿತರ ಮನೆಯ ಮುಂದೆ ಬಂದು ತಿಮ್ಮರಾಯಿ ಇರುವುದನ್ನು ಖಚಿತಪಡಿಸಿಕೊಂಡು ಆತನನ್ನು ಠಾಣೆಗೆ ಕರೆದುಕೊಂಡು ಹೋಗುವ ಸಂದರ್ಭದಲ್ಲಿ ಸದರಿ ತಿಮ್ಮರಾಯಿ ಇವರ ಹೆಂಡತಿ ಶಾಂತ ವಿಷ ಕುಡಿಯುತ್ತೇನೆ ಎಂದು ಜೋರಾಗಿ ಕಿರುಚಿಕೊಂಡಿದ್ದು, ಅಲ್ಲದೆ ತಿಮ್ಮರಾಯಿ ಅಣ್ಣನ ಹೆಂಡತಿ ಕಲಾವತಿ ಇವರು ಹಿಟ್ಟಿನದೊಣ್ಣೆಯಿಂದ ಮೋಹನ್ ಇವರ ಎಡಗೈ ಮತ್ತು ಎಡಗಾಲಿಗೆ ಹೊಡೆದಿರುತ್ತಾರೆ ಹಾಗೂ ತಿಮ್ಮರಾಯಿ ಇವರು ಚಾಸಾ-1 ರವರ ಕತ್ತಿನಪಟ್ಟಿ ಹಿಡಿದು ಕಪಾಲಕ್ಕೆ ಹೊಡೆದಿರುತ್ತಾನೆ ಮತ್ತು ತಿಮ್ಮರಾಯಿ ಇವರು ಪೊಲೀಸ್ ಆದರೇನು ಆತನನ್ನು ಕಟ್ಟಿಹಾಕಿ ಸುಟ್ಟುಬಿಡೋಣ ಹಗ್ಗ ತೆಗೆದುಕೊಂಡು ಬನ್ನಿ ಎಂದು ಹೇಳಿದ್ದು, ಆಗ ಕುಟುಂಬದವರಾದ ವೆಂಕಟಚಲ ಇವರ ಹೆಂಡತಿ ಲಕ್ಷ್ಮಮ್ಮ, ಶಾಂತ ಮತ್ತು ತಿಮ್ಮಮ್ಮ ಇವರು ಅಗ್ಗ ಮತ್ತು ಸೀಮೆಎಣ್ಣೆ ತೆಗೆದುಕೊಂಡು ಬಂದು ನಂತರ ಸದರಿ ಮೋಹನ್ ಇವರನ್ನು ಕಂಬಕ್ಕೆ ಕಟ್ಟಿಹಾಕಿ ಮನಬಂದಂತೆ ದೇಹದ ತುಂಬೆಲ್ಲಾ ಹೊಡೆದಿರುತ್ತಾರೆಂದು ಚಾಸಾ-4 ರವರಿಗೆ ತಿಳಿಸಿರುತ್ತಾರೆ ಹಾಗೂ ಅವರೆಲ್ಲರ ವಿರುದ್ದ ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತಾರೆ. ಆ ಕುರಿತು ನಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲು ಶ್ರೀ ಜಿಎಂಎ  ಆರೋಪಿ ಪರ ವಕೀಲರಿಂದಃ-**

ಜಿಎಂಎ ವಕೀಲರು ವಿಎಸ್ಆರ್ ವಕೀಲರ ಆರೋಪಿತರ ಪರ ವಕೀಲರ ಪರವಾಗಿ ಕಾಲಾಕವಾಶ ಕೇಳಿದ್ದು, ಯಾವುದೇ ಸಕಾರಣಗಳು ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ ಃಇಲ್ಲ**

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)**

**ಓ ಹೇ ಕೇ ಸ ಇ**

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ ಕನಕಪುರ.**

## ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಕನಕಪುರ

## ಸಿ.ಸಿ ನಂಃ 447/2013

| | | | |
|---|---|---|---|
| **ಚಾಸಾ ಃ** | **8** | **ಪ್ರಾಸಾಃ-** | **3** |

| | |
|---|---|
| ಹೆಸರು | ಶ್ಯಾಮ್ |
| ತಂದೆಯ ಹೆಸರು | ಮಹದೇವ್ |
| ವಯಸ್ಸು | 42 |
| ಉದ್ಯೋಗ | ಪಿಐ, ಸಂಚಾರಿ ಪೊಲೀಸ್ ಠಾಣೆ, ಎಲೆಕ್ಟ್ರನಿಕ್ ಸಿಟಿ ಬೆಂಗಳೂರು |
| ವಿಳಾಸ | ಬೆಂಗಳೂರು |

- - - - - - - - - - - - - - - - - - - - - - - - - - - - -

**ದಿಃ01.07.2024ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-</u>**

ನಾನು ದಿ.9.10.2009 ರಿಂದ ದಿ.10.10.2012 ರ ವರೆಗೆ ಹಾರೋಹಳ್ಳಿ ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ.04.05.2012 ರಂದು ರಾತ್ರಿ 8ಃ15 ಕ್ಕೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ನಮ್ಮ ಠಾಣೆಯ ಮೋಹನ್ ಇವರು ನೀಡಿದ ಲಿಖಿತ ದೂರಿನ ಆಧಾರದ ಮೇಲೆ ಠಾಣ ಗುನ್ನ ನಂ0121/2012 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ.

ದಿನಾಂಕ.09.05.2012 ರಂದು ಬೆಳಿಗ್ಗೆ 10ಃ00 ರಿಂದ 10ಃ30 ಗಂಟೆ ಸಮಯದಲ್ಲಿ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಪಂಚರ ಸಮಕ್ಷಮ ಘಟನಾ ಸ್ಥಳದಲ್ಲಿ ಪಂಚನಾಮೆ

ಮಾಡಿ ಒಂದು ಹಿಡಿ ಗಾತ್ರಕ್ಕಿಂತ ಕಡಿಮೆ ಇರುವ ಹಿಟ್ಟಿನ ದೊಣ್ಣೆ, ಪ್ಲಾಸ್ಟಿಕ್ ಹಗ್ಗ, 2 ಲೀಟರ್ ನ ಒಂದು ಪ್ಲಾಸ್ಟಿಕ್ ಬಾಟಲ್ ನ್ನು ಅಮಾನತ್ತುಪಡಿಸಿಕೊಂಡು ಪಂಚನಾಮೆ ಮಾಡಿರುತ್ತೇನೆ. ಸದರಿ ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ಮಾಲುಪಟ್ಟಿ ಸಂಖ್ಯೆ 91/2012 ರಲ್ಲಿ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ದಿನಾಂಕ.09.5.2012 ರಂದು ಚಾಸಾ-2 ಮತ್ತು 3 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ ಹಾಗೂ ಚಾಸಾ-4 ರಿಂದ 7 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿನಾಂಕ.25.5.2012 ರಂದು ಗಾಯಾಳುವಿನ ಗಾಯದ ಪ್ರಮಾಣ ಪತ್ರವನ್ನು ಕನಕಪುರ ಸರ್ಕಾರಿ ಆಸ್ಪತ್ರೆಯಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿ.14.6.2012 ರಂದು ತನಿಖೆಯನ್ನು ಪೂರ್ಣಗೊಳಿಸಿ ಆರೋಪಿತರ ವಿರುದ್ದ ಸಾಕಷ್ಟು ಸಾಕ್ಷ್ಯ ಲಭ್ಯವಾಗಿರುವುದರಿಂದ ದೋಷರೋಪಣ ಪಟ್ಟಿ ಸಲ್ಲಿಸಿರುತ್ತೇನೆ.

ನ್ಯಾಯಾಲಯದ ಮುಂದಿರುವ ದೊಣ್ಣೆ, ಸ್ವಲ್ಪ ಸೀಮೆಎಣ್ಣೆ ಇರುವ 2 ಲೀಟರ್ ನ ಪ್ಲಾಸ್ಟಿಕ್ ಬಾಟಲ್, ಒಂದು ಹಗ್ಗವನ್ನು ಕ್ರಮವಾಗಿ ಎಂಓ-1 ರಿಂದ 3 ಎಂದು ಗುರುತಿಸಲಾಯಿತು.

1 ನೇ ಆರೋಪಿಯನ್ನು ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ಕಳುಹಿಸಿರುತ್ತೇನೆ. ಇತರೆ ಆರೋಪಿತರು ನಿರೀಕ್ಷಣಾ ಜಾಮೀನು ಪಡೆದುಕೊಂಡು ಬಂದು ಠಾಣೆಗೆ ಹಾಜರಾಗಿದ್ದು, ಬಂಧನದ ನಿಯಮಾವಳಿಗಳನ್ನು ಪಾಲಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ.

ದೂರನ್ನು ನಿಪಿ-1, ಸಾಕ್ಷಿಯ ಸಹಿಯನ್ನು ನಿಪಿ-1(ಎ), ಪಂಚನಾಮೆಯನ್ನು ನಿಪಿ-2, ಸಾಕ್ಷಿಯ ಸಹಿಯನ್ನು ನಿಪಿ-2(ಎ), ಪ್ರ.ವ.ವರದಿಯನ್ನು ನಿಪಿ-3, ಸಾಕ್ಷಿಯ ಸಹಿಯನ್ನು ನಿಪಿ-3(ಎ), ಗಾಯದ ಪ್ರಮಾಣ ಪತ್ರವನ್ನು ನಿಪಿ-4 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಶ್ರೀ ಜಿಎಂಎ ಆರೋಪಿ ಪರ ವಕೀಲರಿಂದಃ-**

ಜಿಎಂಎ ವಕೀಲರು ವಿಎಸ್ಆರ್ ವಕೀಲರ ಆರೋಪಿತರ ಪರ ವಕೀಲರ ಪರವಾಗಿ ಕಾಲಾಕವಾಶ ಕೇಳಿದ್ದು, ಯಾವುದೇ ಸಕಾರಣಗಳು ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ :ಇಲ್ಲ**

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)**

**ಓ ಹೇ ಕೇ ಸ ಇ**

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ ಕನಕಪುರ.**